ನಾಡಿದ್ದು ನಗರದಲ್ಲಿ ವಿಶ್ವದಾಖಲೆ ಯೋಗಕ್ಕೆ ಪ್ಲ್ಯಾನ್

ಯೋಗ ದಿನ ನಿಮಿತ್ತ 1 ದಿನದಲ್ಲಿ 10 ಲಕ್ಷ ಜನರಿಗೆ ಯೋಗ ಕಲಿಸಲು ಆಯುಷ್ ಇಲಾಖೆ ಸಜ್ಜು | ರಾಜ್ಯಾದ್ಯಂತ ಯೋಗೋತ್ಸವ

■ ಉದಯವಾಣಿ ಸಮಾಚಾರ

ಬೆಂಗಳೂರು: ಆಯುಷ್ ಇಲಾಖೆ ಅಂತಾರಾಷ್ಟ್ರೀಯ ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಯೋಗೋತ್ಸವದಲ್ಲಿ ಹೊಸದಾಗಿ 10 ಲಕ್ಷ ಮಂದಿಗೆ ಯೋಗ ಕಲಿಸುವ ಮೂಲಕ ವಿಶ್ವದಾಖಲೆ ನಿರ್ಮಿಸಲು ಮುಂದಾಗಿದೆ. ಆಯುಷ್ ಇಲಾಖೆ ರಾಜ್ಯದ ವಿವಿಧ ಜಿಲ್ಲೆಯಲ್ಲಿ ಜೂ.21ರಂದು ನಡೆಯಲಿರುವ ಅಂತಾರಾಷ್ಟ್ರೀಯ ಯೋಗ ದಿನಾಚರಣೆಯನ್ನು ಹಮ್ಮಿಕೊಂಡಿದೆ. ಆ ಮೂಲಕ ರಾಜ್ಯಾದ್ಯಂತ ಯೋಗ ಕುರಿತು ಜಾಗೃತಿ ಮೂಡಿಸಲು ಮುಂದಾಗಿದೆ. ಒಂದೇ ದಿನ ಸುಮಾರು 10 ಲಕ್ಷ ಮಂದಿವನ್ನು ಹೊಸದಾಗಿ ಯೋಗವನ್ನು ಕಲಿಯಲಿದ್ದಾರೆ. ಈ ವೇಳೆ ಯೋಗದಿಂದಾಗುವ ಮಾನಸಿಕ ಹಾಗೂ ದೈಹಿಕ ಆರೋಗ್ಯ ವೃದ್ಧಿ ಕುರಿತು ಜಾಗೃತಿ ಮೂಡಿಸಲಿದ್ದಾರೆ.

ವಿದ್ಯಾರ್ಥಿಗಳ ಸಾಥ್!: ಆಯುಷ್ ಇಲಾಖೆ ವಿಶೇಷವಾಗಿ ಯೋಗದ ಬಗ್ಗೆ ಅರಿವು ಮೂಡಿಸಲು ವಿಶೇಷವಾಗಿ ವಿದ್ಯಾರ್ಥಿ ಸಮುದಾಯವನ್ನು ಆಯ್ಕೆ ಮಾಡಿದೆ. ಅದರ ಭಾಗವಾಗಿ ರಾಜ್ಯದಲ್ಲಿ ಕಾರ್ಯಾಚರಿಸುತ್ತಿರುವ ಸಮಾಜ ಕಲ್ಯಾಣ ಇಲಾಖೆಯ ವಸತಿ ನಿಲಯ, ಕರ್ನಾಟಕ ವಸತಿ ಶಿಕ್ಷಣ ಸಂಸ್ಥೆ ಹಾಗೂ ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಸಂಸ್ಥೆಯ ವಿದ್ಯಾರ್ಥಿಗಳು ಸೇರಿದಂತೆ ಮಹಿಳಾ ಮತ್ತು ಮಕ್ಕಳ ಇಲಾಖೆಯ ವಿಭಾಗದಿಂದ ಒಟ್ಟು 4 ಲಕ್ಷ ಮಂದಿ ಯೋಗೋತ್ಸವದಲ್ಲಿ ಪಾಲ್ಗೊಳ್ಳಲಿದ್ದಾರೆ.



ಎಲ್ಲೆಲ್ಲಿ ಯೋಗ?
- ನಗರದ ಪ್ರಮುಖ ಮಾಲ್
- ವಿವಿಧ ಯೋಗ ಶಿಕ್ಷಣ ಸಂಸ್ಥೆಗಳಲ್ಲಿ
- ಅಪಾರ್ಟ್‌ಮೆಂಟ್ ಅಸೋಸಿಯೇಷನ್‌ನಲ್ಲಿ
- ಸರ್ಕಾರಿ ವಸತಿ ನಿಲಯದಲ್ಲಿ
- ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ

"ಮೊದಲ ಬಾರಿಗೆ ವಿಶ್ವ ಯೋಗ ದಿನಾಚರಣೆ ಅಂಗವಾಗಿ ಹಮ್ಮಿಕೊಂಡ ಯೋಗೋತ್ಸವದಲ್ಲಿ ಯೋಗ ಕಲಿಯಲಿದ್ದೇನೆ. ವಿಶ್ವ ದಾಖಲೆಯ ಅದ್ಭುತ ಕಾರ್ಯಕ್ರಮದಲ್ಲಿ ನಾನು ಭಾಗಿಯಾಗುತ್ತಿರುವುದು ಸಂತಸ ತಂದಿದೆ. ಮುಂದಿನ ದಿನದಲ್ಲಿ ಯೋಗವನ್ನು ಕಲಿತು ಮನೆಯವರಿಗೂ ಕಲಿಸುತ್ತೇನೆ."
● **ಶೋಬಿತಾ,** ಗೈಡ್ಸ್ ವಿದ್ಯಾರ್ಥಿನಿ ನಾಗಸಂದ್ರ ಬೆಂಗಳೂರು.

"ರಾಜ್ಯಾದ್ಯಂತ ಯೋಗೋತ್ಸವ ಅಂಗವಾಗಿ ಹೊಸದಾಗಿ 10 ಲಕ್ಷ ಮಂದಿಗೆ ಹೊಸದಾಗಿ ಯೋಗ ಕಲಿಸಿಕೊಡುವ ಮೂಲಕ ಹೊಸ ದಾಖಲೆ ನಿರ್ಮಿಸಲು ಸಿದ್ಧತೆ ನಡೆಸಲಾಗುತ್ತಿದೆ. ಇದಕ್ಕೆ ವಿಶೇಷವಾಗಿ ಸಾರ್ವಜನಿಕರ ಸಹಕಾರವನ್ನು ಪಡೆಯಲಾಗಿದೆ."
● **ಡಾ. ಹರೀಶ್ ಬಾಬು,** ಉಪನಿರ್ದೇಶಕ, ಪ್ರಕೃತಿ ಹಾಗೂ ಯೋಗ ಚಿಕಿತ್ಸೆ, ಆಯುಷ್ ಇಲಾಖೆ

ಸಂಘ ಸಂಸ್ಥೆಗಳು: ಆಯುಷ್ ಇಲಾಖೆಯು ರಾಜ್ಯಾದ್ಯಂತ ಯೋಗೋತ್ಸವದಲ್ಲಿ ದಾಖಲೆ ನಿರ್ಮಿಸಲು ಸಾರ್ವಜನಿಕರ ಹಾಗೂ ಸಂಘ ಸಂಸ್ಥೆಗಳ ಸಹಕಾರವನ್ನು ಪಡೆದುಕೊಂಡಿದೆ. ಈಗಾಗಲೇ ಅಪಾರ್ಟ್‌ಮೆಂಟ್ ಅಸೋಸಿಯೇಷನ್, ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ, ಯೋಗ ಗಂಗೋತ್ರಿ ಟ್ರಸ್ಟ್, ಶ್ರೀ ಪತಂಜಲಿ ಯೋಗಾಶ್ರಮ ಟ್ರಸ್ಟ್ ಪ್ರಜಾಪಿತ ಬ್ರಹ್ಮಕುಮಾರಿ ಸಂಸ್ಥೆ, ಜೈನ್ ಯುನಿವರ್ಸಿಟಿ, ಲುಲು ಮಾಲ್ ಹಾಗೂ ಮಾಲ್ ಆಫ್ ಏಷ್ಯಾ ಸಹಕಾರದಲ್ಲಿ ಯೋಗೋತ್ಸವ ಅಂಗವಾಗಿ ಸಾಮೂಹಿಕ ಯೋಗಾಸನ ಮಾಡಲಾಗುತ್ತದೆ. ಈ ವೇಳೆ ಸುಮಾರು 6 ಲಕ್ಷ ಮಂದಿ ಭಾಗವಹಿಸುವ ನಿರೀಕ್ಷೆ ಇದೆ.

ಪತ್ರಿಕಾ ವಿತರಕರ ಬೇಡಿಕೆ ಪರಿಗಣನೆ: ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ

■ ಉದಯವಾಣಿ ಸಮಾಚಾರ

ಬೆಂಗಳೂರು: 'ಪತ್ರಿಕಾ ವಿತರಕರ ವಿವಿಧ ಬೇಡಿಕೆಗಳನ್ನು ಸರ್ಕಾರ ಸಹಾನುಭೂತಿಯಿಂದ ಪರಿಗಣಿಸಲಿದೆ' ಎಂದು ಮುಖ್ಯಮಂತ್ರಿ ಮಾಧ್ಯಮ ಸಲಹೆಗಾರ ಕೆ.ವಿ. ಪ್ರಭಾಕರ್ ತಿಳಿಸಿದರು.

ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘದ ರಾಜ್ಯ ಘಟಕದ ಅಧ್ಯಕ್ಷ ಶಿವಾನಂದ ತಗಡೂರು ಮತ್ತು ರಾಜ್ಯ ಪತ್ರಿಕಾ ವಿತರಕರ ಒಕ್ಕೂಟದ ರಾಜ್ಯ ಘಟಕದ ಅಧ್ಯಕ್ಷ ಕೆ. ಶಂಭುಲಿಂಗ ವಿಧಾನಸೌಧದಲ್ಲಿ ಮುಖ್ಯಮಂತ್ರಿಗಳ ಮಾಧ್ಯಮ ಸಲಹೆಗಾರರನ್ನು ಭೇಟಿ ಮಾಡಿ ಚರ್ಚೆ ನಡೆಸಿದರು.

ಈ ವೇಳೆ ಭರವಸೆ ನೀಡಿದ ಪ್ರಭಾಕರ್, 'ಈಗಾಗಲೇ ನೀಡಿದ್ದ ಭರವಸೆಯಂತೆ ಕಾರ್ಮಿಕ ಇಲಾಖೆಯ ಮೂಲಕ ಪತ್ರಿಕಾ ವಿತರಕರಿಗೆ ಸೌಲಭ್ಯ ಕೊಡಿಸಲು ಕ್ರಮ ಕೈಗೊಳ್ಳಲಾಗಿದೆ. ಪತ್ರಿಕೆ ಹಾಕುವಾಗ ಮೃತಪಟ್ಟವರಿಗೆ ಮತ್ತು ಅಪಘಾತದಲ್ಲಿ ಗಾಯಗೊಂಡ ಪತ್ರಿಕಾ ವಿತರಕರಿಗೆ ನೆರವು ನೀಡುವ ಯೋಜನೆಯನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಘೋಷಣೆ ಮಾಡಿ ಅನುಷ್ಠಾನಕ್ಕೆ ತಂದಿದ್ದಾರೆ' ಎಂದು ಹೇಳಿದರು.

ಚಿತ್ರದುರ್ಗದಲ್ಲಿ ಪತ್ರಿಕಾ ವಿತರಕರಿಗೆ ನಿವೇಶನವನ್ನು ನೀಡಲಾಗಿದ್ದು, ಅದು ತಾಂತ್ರಿಕ ಕಾರಣಕ್ಕಾಗಿ ನನೆಗುದಿಗೆ ಬಿದ್ದಿದೆ. ಈ ಬಗ್ಗೆ ಗಮನಹರಿಸಿ ಕ್ರಮ ಕೈಗೊಳ್ಳುವಂತೆ ವಿನಂತಿಸಿದಾಗ, ತಕ್ಷಣ ಕಂದಾಯ ಇಲಾಖೆ ಸಚಿವಾಲಯಕ್ಕೆ ಫೋನಾಯಿಸಿದ ಕೆ.ವಿ.ಪ್ರಭಾಕರ್ ಅವರು, ಸಮಸ್ಯೆಯನ್ನು ಶೀಘ್ರವಾಗಿ ಇತ್ಯರ್ಥ ಮಾಡಿ ನಿವೇಶನ ನೀಡುವಂತೆ ಸೂಚಿಸಿದರು.

ಇದೇ ವೇಳೆ ಚಿತ್ರದುರ್ಗದಲ್ಲಿ ನಡೆಸಲು ಉದ್ದೇಶಿಸಿರುವ ಪತ್ರಿಕಾ ವಿತರಕರ ದಿನಾಚರಣೆಗೆ ಕೆ.ವಿ.ಪ್ರಭಾಕರ್ ಅವರನ್ನು ಆಹ್ವಾನಿಸಲಾಯಿತು.

ಶ್ರೀವಿದ್ಯೇಶ ತೀರ್ಥ ಶ್ರೀಪಾದರ 70ನೇ ಜನ್ಮ ದಿನಾಚರಣೆ

■ ಉದಯವಾಣಿ ಸಮಾಚಾರ

ಬೆಂಗಳೂರು: ಉಡುಪಿಯ ಶ್ರೀಭಂಡಾರ ಕೇರಿ ಮಠಾಧೀಶರಾದ ಶ್ರೀವಿದ್ಯೇಶ ತೀರ್ಥ ಶ್ರೀಪಾದರ 70ನೇ ಜನ್ಮ ನಕ್ಷತ್ರ ಅಂಗವಾಗಿ ಶ್ರೀಭೀಮನಕಟ್ಟೆ ಮಠಾಧೀಶರಾದ ಶ್ರೀರಘುವರೇಂದ್ರ ತೀರ್ಥ ಶ್ರೀಪಾದರು ಹೂವಿನ ಕಿರೀಟ ತೊಡಿಸಿ, ಶಾಲು ಹೊದಿಸಿ ಸನ್ಮಾನಿಸಿದರು.

ಬೆಂಗಳೂರಿನ ಗಿರಿನಗರದ ಶ್ರೀಭಂಡಾರ ಕೇರಿ ಮಠದ ಸಭಾಭವನದಲ್ಲಿ ಹಮ್ಮಿಕೊಂಡಿದ್ದ ಕಾರ್ಯಕ್ರಮದಲ್ಲಿ 70 ವಿದ್ವಾಂಸರು ಉಪನಿಷತ್, ರಾಮಾಯಣ, ಮಹಾಭಾರತ, ಭಾಗವತ ಮುಂತಾದ ಭಾರತೀಯ ಆರ್ಷ ಗ್ರಂಥಗಳ ಕುರಿತು ತಮ್ಮ ವಿಚಾರಧಾರೆ ಮಂಡಿಸುವ 'ಶ್ರೀವಿದ್ಯೇಶ ವಿಚಾರ ವಿನೋದೋತ್ಸವ' ಕಾರ್ಯಕ್ರಮ ಜರುಗಿತು. ಜತೆಗೆ ಪ್ರಣತಿ ದರ್ಶನ ಹಾಗೂ 'ವಿದ್ಯೇಶ ವಿಚಾರ ಸಪ್ತತಿ' ಕೃತಿ ಬಿಡುಗಡೆಯಾಯಿತು.

ಇದೇ ಸಂದರ್ಭದಲ್ಲಿ ವಿದ್ಯಾ ಕ್ಷೇತ್ರದಲ್ಲಿ ಆನಂದವನ ಸಂಸ್ಥೆಯ ಅಪೂರ್ವ ಸಾಧನೆ ಗುರುತಿಸಿ ಭಂಡಾರಕೇರಿ ಮಠದ ವತಿಯಿಂದ ನೀಡಲಾಗುವ 5 ಲಕ್ಷ ರೂಪಾಯಿ ಪಾರಿತೋಷಕವನ್ನು ಸಂಸ್ಥೆಯ ರೂವಾರಿ ವೇದಗರ್ಭ ಶ್ರೀನಿವಾಸ ಸ್ವೀಕರಿಸಿದರು. ಈ ವೇಳೆ ನೂರಾರು ಭಕ್ತರು ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ನಾಡಿದ್ದು 'ಭಾರತೀಯ ಆಹಾರ ಸುರಕ್ಷತೆ' ಸಮಾವೇಶ

■ ಉದಯವಾಣಿ ಸಮಾಚಾರ

ಬೆಂಗಳೂರು: ಆಹಾರ ಸುರಕ್ಷತೆಯಲ್ಲಿ ಸಹಯೋಗವನ್ನು ಬೆಳೆಸುವುದು ಮತ್ತು ಶ್ರೇಷ್ಠತೆಯನ್ನು ಗುರುತಿಸುವ ನಿಟ್ಟಿನಲ್ಲಿ ಫುಡ್ ಸೇಫ್ಟಿ ವರ್ಕ್ಸ್‌ನಿಂದ ಜೂ.21ಕ್ಕೆ 'ಭಾರತೀಯ ಆಹಾರ ಸುರಕ್ಷತೆ ಸಮಾವೇಶ-2024' ಅನ್ನು ಆಯೋಜಿಸಲಾಗಿದೆ.

ಈ ಸಮಾವೇಶವನ್ನು ನಗರದ ದೊಮ್ಮಲೂರಿನ ಬೆಂಗಳೂರು ಅಂತಾರಾಷ್ಟ್ರೀಯ ಕೇಂದ್ರದಲ್ಲಿ ಹಮ್ಮಿಕೊಂಡಿದ್ದು, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಜತೆಗೆ ಎಫ್‌ಎಸ್‌ಎಸ್‌ಎಐ ಆಯುಕ್ತ ಡಾ. ಕೆ. ಶ್ರೀನಿವಾಸ್, ವೇಕ್ ಫೀಲ್ಡ್ ಸಂಸ್ಥೆಯ ಸಿಇಒ ದೀಪೇಂದ್ರ ಸಿ. ಭಾಗವಹಿಸಲಿದ್ದಾರೆ ಎಂದು ಬ್ರಿಟಾನಿಯಾದ ಮಾಜಿ ಕಾರ್ಪೋರೇಟ್ ಮುಖ್ಯಸ್ಥ ಡಾ. ಶಶಿಕಾಂತ್ ಕುಣಿಗಲ್ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಸಮಾವೇಶದಲ್ಲಿ 200ಕ್ಕೂ ಹೆಚ್ಚು ಪ್ರತಿನಿಧಿಗಳು ಭಾಗವಹಿಸಲಿದ್ದಾರೆ. ಹೊಸ ಮತ್ತು ಉತ್ತೇಜಕ ಅಂಶಗಳನ್ನು ಪರಿಚಯಿಸುತ್ತಾ, ದೇಶದಲ್ಲಿ ಬೆಳೆಯುತ್ತಿರುವ ಎಂಎಸ್‌ಎಂಇ ವಲಯವನ್ನು ಗುರಿಯಾಗಿಟ್ಟುಕೊಂಡು ಆಹಾರ ಸುರಕ್ಷತಾ ಮನದಂಡಗಳನ್ನು ಎತ್ತಿಹಿಡಿಯಲು ಮತ್ತು ಉತ್ತೇಜಿಸಲು ಅಸಾಧಾರಣ ಬದ್ಧತೆಯನ್ನು ಪ್ರದರ್ಶಿಸುವ ವ್ಯಕ್ತಿ ಮತ್ತು ಸಂಸ್ಥೆಗಳನ್ನು ಗುರುತಿಸಿ, ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಫುಡ್ ಸೇಫ್ಟಿ ವರ್ಕ್ಸ್ ಸಂಸ್ಥೆಯ ಸ್ಥಾಪಕಿ ಸಾರಿಕಾ ಅಗರ್ವಾಲ್, ಮೆಟ್ರೋ ಕ್ಯಾಶ್ ಆ್ಯಂಡ್ ಕ್ಯಾರಿ ಇಂಡಿಯಾ ಸಂಸ್ಥೆಯ ಗುಣಮಟ್ಟ ಭರವಸೆ ವಿಭಾಗದ ಮುಖ್ಯಸ್ಥ ಕೆ.ಆರ್. ಶ್ರೀನಿವಾಸ್ ಇದ್ದರು. ಹೆಚ್ಚಿನ ಮಾಹಿತಿಗಾಗಿ https://conclave.foodsafetyworks.com ವೆಬ್‌ಸೈಟ್‌ಗೆ ಭೇಟಿ ನೀಡಬಹುದಾಗಿದೆ.

ಜೂ.22ರಂದು ಬೆಂಗಳೂರು ಉತ್ತನ್ನಗಳ ಸಂತೆ

■ ಉದಯವಾಣಿ ಸಮಾಚಾರ

ಬೆಂಗಳೂರು: ನಗರದ ಕೃಷಿ ವಿಶ್ವವಿದ್ಯಾಲಯ ಜೂ.22ರಂದು 'ಬೆಂಗಳೂರಿನ ಉತ್ತನ್ನಗಳ ಸಂತೆ' ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಜಿಕೆವಿಕೆ ಆವರಣದಲ್ಲಿ ಬೆಳಗ್ಗೆ 7.30ರಿಂದ ಮಧ್ಯಾಹ್ನ 12.30ರ ವರೆಗೆ ಉತ್ತನ್ನಗಳ ಸಂತೆ ಹಮ್ಮಿಕೊಂಡಿದೆ. ಅದರ ಭಾಗವಾಗಿ ಬೆಂಗಳೂರಿನ ಉತ್ತನ್ನಗಳು, ಜಿಕೆವಿಕೆ ಹೊರತಂದಿರುವ ಉತ್ತನ್ನಗಳು, ಬೇಕರಿ ಉತ್ತನ್ನಗಳು, ತಿಂಡಿ-ತಿನಿಸುಗಳ ಮಿಶ್ರಣ, ಉಪ್ಪಿನಕಾಯಿ, ಚಟ್ನಿ ಪುಡಿ ಇನ್ನು ಮುಂತಾದವುಗಳ ಪ್ರದರ್ಶನ ಮತ್ತು ಮಾರಾಟದ ಅವಕಾಶ ಕಲ್ಪಿಸಲಾಗಿದೆ. ಸಾರ್ವಜನಿಕರಿಗೆ ಹಾಗೂ ರೈತರಿಗೆ ಭಾಗವಹಿಸಲು ಮುಕ್ತ ಅವಕಾಶ ಕಲ್ಪಿಸಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ಪುರಸಭಾ ಕಾರ್ಯಾಲಯ ಮಾಗಡಿ
ದೂರವಾಣಿ : 080 -27745221 ಫ್ಯಾಕ್ಸ್ : 080-27745199
ಇಮೇಲ್: tmc_2007magadi@yahoo.co.in ವೆಬ್‌ಸೈಟ್: www.magaditown.gov.in
ಸಂಖ್ಯೆ : ಪುಕಾಮಾ/ಕಿ.ಅ/ಟೆಂಡರ್/ಸಿಆರ್/2/2024-25 ದಿನಾಂಕ : 15-06-2024

ಅಲ್ಪಾವಧಿ ಟೆಂಡರ್ ಪ್ರಕಟಣೆ

ಮಾಗಡಿ ಪುರಸಭಾ ವ್ಯಾಪ್ತಿಯಲ್ಲಿ 2024-25 ನೇ ಸಾಲಿನ 15 ನೇ ಹಣಕಾಸು ಮುಕ್ತ ಅನುದಾನ, 2024-25 ನೇ ಸಾಲಿನ ಎಸ್.ಎಫ್.ಸಿ (ಮುಕ್ತನಿಧಿ) ಮತ್ತು ಪುರಸಭಾ ನಿಧಿಯ ಶೇ. 24.10, ಶೇ. 7.25 ಮತ್ತು ಶೇ.5ರ ಯೋಜನೆ, 2023-24 ನೇ ಸಾಲಿನ ಎಸ್.ಎಫ್.ಸಿ (ಕು. ನೀರು) ಯೋಜನೆಯಡಿ ಮತ್ತು ಸ್ವಚ್ಛ ಭಾರತ್ ಮಿಷನ್ ಯೋಜನೆಯಡಿ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ನಿರ್ವಹಿಸಲು ಟೆಂಡರ್‌ಗಳನ್ನು ಆಹ್ವಾನಿಸಲಾಗಿದೆ.

1) DMA/2024-25/OW/WORK_INDENT18616, ರೂ. 1.53 ಲಕ್ಷಗಳು, ಇ.ಎಂ.ಡಿ. ರೂ. 3825/-, ಮೀಸಲಾತಿ ಸಾಮಾನ್ಯ, 2) DMA/2024-25/WS/WORK_INDENT 18615, ರೂ. 2.88 ಲಕ್ಷಗಳು, ಇ.ಎಂ.ಡಿ. ರೂ. 7,200/-, ಮೀಸಲಾತಿ ಸಾಮಾನ್ಯ, 3) DMA/2024-25/OW/WORK_INDENT18613, ರೂ. 1.00 ಲಕ್ಷಗಳು ಇ.ಎಂ.ಡಿ. ರೂ. 2500/-, ಮೀಸಲಾತಿ ಸಾಮಾನ್ಯ, 4) DMA/2024-25/RD/WORK_INDENT 18612, ರೂ. 1.62 ಲಕ್ಷಗಳು ಇ.ಎಂ.ಡಿ. ರೂ. 4050/-, ಮೀಸಲಾತಿ ಸಾಮಾನ್ಯ, 5) DMA/2024-25/OW/WORK_INDENT18611, ರೂ. 0.50 ಲಕ್ಷಗಳು ಇ.ಎಂ.ಡಿ. ರೂ. 625/-, ಮೀಸಲಾತಿ ಪರಿಶಿಷ್ಟ ಪಂಗಡ, 6) DMA/2024-25/OW/WORK_INDENT 18610, ರೂ. 1.50 ಲಕ್ಷಗಳು ಇ.ಎಂ.ಡಿ. ರೂ. 1875/-, ಮೀಸಲಾತಿ ಪರಿಶಿಷ್ಟ ಜಾತಿ, 7) DMA/ 2024-25/WS/WORK_INDENT18609, ರೂ. 0.70 ಲಕ್ಷಗಳು ಇ.ಎಂ.ಡಿ. ರೂ. 1750/-, ಮೀಸಲಾತಿ ಸಾಮಾನ್ಯ, 8) DMA/2024-25/OW/WORK_INDENT18608, ರೂ. 1.71 ಲಕ್ಷಗಳು ಇ.ಎಂ.ಡಿ. ರೂ. 4275/-, ಮೀಸಲಾತಿ ಸಾಮಾನ್ಯ, 9) DMA/2023-24/OW/WORK_INDENT17353, ರೂ. 78.50 ಲಕ್ಷಗಳು ಇ.ಎಂ.ಡಿ. ರೂ. 1,57,000/-, ಮೀಸಲಾತಿ ಸಾಮಾನ್ಯ, 10) DMA/2024-25/WS/WORK_INDENT 17850/CALL-2, ರೂ. 4.12 ಲಕ್ಷಗಳು ಇ.ಎಂ.ಡಿ. ರೂ. 10,300/-, ಮೀಸಲಾತಿ ಸಾಮಾನ್ಯ, 11) DMA/ 2024-25/OW/WORK_INDENT18809, ರೂ. 4.20 ಲಕ್ಷಗಳು ಇ.ಎಂ.ಡಿ. ರೂ. 10,500/-, ಮೀಸಲಾತಿ ಸಾಮಾನ್ಯ, 12) DMA/2024-25/OW/WORK_INDENT18807, ರೂ. 15.72 ಲಕ್ಷಗಳು ಇ.ಎಂ.ಡಿ. ರೂ. 39,300/-, ಮೀಸಲಾತಿ ಸಾಮಾನ್ಯ, 13) DMA/ 2024-25/RD/WORK_INDENT18938, ರೂ. 39.60 ಲಕ್ಷಗಳು ಇ.ಎಂ.ಡಿ. ರೂ. 39600/-, ಮೀಸಲಾತಿ ಪರಿಶಿಷ್ಟ ಜಾತಿ.

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಆಧ್ಯಾದೇಶ 1999 ಮತ್ತು ನಿಯಮಗಳು 2000ದಂತೆ, ಕರ್ನಾಟಕ ಲೋಕೋಪಯೋಗಿ ಇಲಾಖೆ, ಮತ್ತು ಇ-ಪ್ರೊಕ್ಯೂರ್‌ಮೆಂಟ್ ಸೆಲ್, ಬೆಂಗಳೂರು ರವರಲ್ಲಿ ನೋಂದಾಯಿತ ಅರ್ಹ ಗುತ್ತಿಗೆದಾರರುಗಳಿಂದ ಐಟಂವಾರು ಆನ್‌ಲೈನ್ ಟೆಂಡರ್‌ಗಳನ್ನು ಆಹ್ವಾನಿಸಲಾಗಿದ್ದು, ಆಸಕ್ತ ಅರ್ಹ ಗುತ್ತಿಗೆದಾರರು / ಎಜನ್ಸಿರವರುಗಳು ತಮ್ಮ ದರ ನಮೂದಿಸಿದ ಟೆಂಡರ್‌ಗಳನ್ನು ಇ-ಪ್ರೊಕ್ಯೂರ್‌ಮೆಂಟ್ Visit : www.kppp.karnataka.gov.in ಪೊರ್ಟಲ್‌ನಲ್ಲಿ ಕೆಡಬ್ಲ್ಯೂ - 1ರ ನಿಯಮಗಳಂತೆ ಈ ಕೆಳಗೆ ನಿಗಧಿಪಡಿಸಿದ ದಿನಾಂಕಗಳಂದು ಆನ್‌ಲೈನ್‌ನಲ್ಲಿ ಟೆಂಡರ್ ಸಲ್ಲಿಸತಕ್ಕದ್ದು. ಕಾಮಗಾರಿಗಳ ವಿವರ ಹಾಗೂ ಟೆಂಡರ್ ಪ್ರಕಟಣೆ ವಿವರಗಳನ್ನು ಜಿಲ್ಲಾ ಟೆಂಡರ್ ಬುಲೆಟಿನ್, ಜಿಲ್ಲಾ ನಗರಾಭಿವೃದ್ಧಿ ಕೋಶ, ರಾಮನಗರ ಹಾಗೂ ಪುರಸಭೆ ಮಾಗಡಿ ಕಛೇರಿ ಸೂಚನಾ ಫಲಕದಲ್ಲಿ ಮತ್ತು ವೆಬ್‌ಸೈಟ್ : www.magaditown.mrc.gov.in ನಲ್ಲಿ ವೀಕ್ಷಿಸಬಹುದು.

ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಕಾಮಗಾರಿಗಳಿಗೆ ಟೆಂಡರ್ ಸಲ್ಲಿಸಲು ಕೊನೆಯ ದಿನಾಂಕ : 25-06-2024 ರ ಸಂಜೆ 5.30 ಕ್ಕೆ, ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್‌ಗಳನ್ನು ತೆರೆಯುವ ದಿನಾಂಕ : 27-06-2024 ರ ಬೆಳಗ್ಗೆ 11.30 ಗಂಟೆಗೆ ತೆರೆಯಲಾಗುವುದು ಮತ್ತು ಕ್ರ. ಸಂ. 9 ರ ಕಾಮಗಾರಿಯ ತಾಂತ್ರಿಕ ಬಿಡ್ ತೆರೆಯುವ ದಿನಾಂಕ : 27-06-2024 ರ ಬೆಳಗ್ಗೆ 11.30 ಗಂಟೆಗೆ ಹಾಗೂ ಆರ್ಥಿಕ ಬಿಡ್ ಅನ್ನು ದಿನಾಂಕ : 29-06-2024 ರ ಬೆಳಗ್ಗೆ 11.30 ಗಂಟೆಗೆ ತೆರೆಯಲಾಗುವುದು.

ಸಹಿ/- ಆಡಳಿತಾಧಿಕಾರಿ, ಪುರಸಭೆ, ಮಾಗಡಿ.
ಸಹಿ/- ಮುಖ್ಯಾಧಿಕಾರಿ, ಪುರಸಭೆ, ಮಾಗಡಿ.
ಡಿಪಿಆರ್/ರಾಮನಗರ/53/ಮಗಡಿಪಾಲ್/2024-25

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ
ಕಾರ್ಯಪಾಲಕ ಅಭಿಯಂತರರ ಕಛೇರಿ, ದಾಸರಹಳ್ಳಿ ವಿಭಾಗ, ಬಿಬಿಎಂಪಿ ಕಛೇರಿ, ಬೆಂಗಳೂರು-560073
ನಂ.: ಬಿಬಿಎಂಪಿ/ಕಾಪಾಅ/ದಾವಿ/ಟೆಂ/05/2024-25 ದಿನಾಂಕ: 15.06.2024

ಆಸಕ್ತಿ ವ್ಯಕ್ತಪಡಿಸುವಿಕೆ (ಇಒಐ) ಪ್ರಕಟಣೆ

ಅಲ್ಪಾವಧಿ ಟೆಂಡರ್ (ದ್ವಿ ಲಕೋಟೆ ಪದ್ಧತಿ)
(ಜಿಬಿಕೆ ಕೆಪಿಪಿಪಿ ಪೋರ್ಟಲ್ ಮೂಲಕ ಮಾತ್ರ)

ಕಾರ್ಯಪಾಲಕ ಅಭಿಯಂತರರು, ದಾಸರಹಳ್ಳಿ ವಿಭಾಗ, ಬಿಬಿಎಂಪಿ ಇವರು ಐ.ಟಿ. ಇ.ಎಸ್.ಐ, ಪಿ.ಎಫ್, ಕಾರ್ಮಿಕ ಇಲಾಖೆ ಮತ್ತು ಕರ್ನಾಟಕ ಸರ್ಕಾರದ ಇತರೆ ಶಾಸನಬದ್ಧ ಪ್ರಾಧಿಕಾರಗಳಲ್ಲಿ ನೋಂದಾಯಿತ ಏಜೆನ್ಸಿಗಳಿಂದ ಕರ್ನಾಟಕ ಸಾರ್ವಜನಿಕ ಸಂಗ್ರಹಣೆಯಲ್ಲಿ ಪಾರದರ್ಶಕತೆ ಕಾಯ್ದೆ 2000ರ ಅಡಿಯಲ್ಲಿ ಕೆಳಗೆ ನಮೂದಿಸಲಾದ ಸೇವೆಗಳಿಗಾಗಿ ಎಲೆಕ್ಟ್ರಾನಿಕ್ ದ್ವಿ ಲಕೋಟೆ ಟೆಂಡರಿಂಗ್ ಪದ್ಧತಿಯಲ್ಲಿ (ಇ-ಪ್ರೊಕ್ಯೂರ್‌ಮೆಂಟ್) ಸೂಚಿತ ಮಾದರಿಯಲ್ಲಿ ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ.

ಕ್ರ. ಸಂ.	ಕಾಮಗಾರಿಯ ಹೆಸರು
	**ಶೆಟ್ಟಿ